ಶ್ರೀ ಎಂ. ಚಂದ್ರಶೇಖರ್.— ಇದೆಲ್ಲಾ ಅದರೊಳಗೆ ಸೇರುತ್ತದೆ. ಎಲ್ಲವನ್ನೂ ಅವರಿಗೆ ಕೊಟ್ಟುಬಿಟ್ಟಿದ್ದೇವೆ. ಎಲ್ಲವನ್ನೂ ಅಧ್ಯಯನ ಮಾಡಿ ವರದಿ ಕೊಡಿ ಎಂದು ತಿಳಿಸಿದ್ದೇವೆ.

ಹೊಸದುರ್ಗ ತಾಲ್ಲೂಕಿನಲ್ಲಿ ಕೋಕನಟ್ ಪಿಕಪ್ಸುಗಳನ್ನು ನಿರ್ಮಿಸುವುದು.

೧೫೧೫. ಶ್ರೀ ಜಿ. ರಾಮದಾಸ್ (ಹೊಸದುರ್ಗ).—ಮಾನ್ಯ ವಿದ್ಯುತ್ ಹಾಗೂ ತೋಟಗಾರಿಕೆ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ೧೯೮೮-೮೯ನೇ ಸಾಲಿನಲ್ಲಿ ಚಿತ್ರದುರ್ಗ ಜಿಲ್ಲೆ ಹೊಸದುರ್ಗ ತಾಲ್ಲೂಕಿನಲ್ಲಿ ಕೋಕನಟ್ ಪಿಕ್‌ಅಪ್ ನಿರ್ಮಾಣ ಮಾಡಲು ಸರ್ಕಾರ ಉದ್ದೇಶಿಸಿದೆಯೇ ?

ಆ) ಇಂತಹ ಉದ್ದೇಶಿತ ತೆಂಗು ಅಣೆಗಳಲ್ಲಿ ಮಾಡದ ಕೆರೆ ಹೋಬಳಿಗೆ ಎಷ್ಟು ಕೋಕನಟ್ ಪಿಕಪ್ ಮಂಜೂರಾತಿ ನೀಡಲು ಸರ್ಕಾರವು ಉದ್ದೇಶಿಸಿದೆ,

ಇ) ಇದುವರೆಗೆ ಚಿತ್ರದುರ್ಗ ಜಿಲ್ಲೆಯಲ್ಲಿ ನಿರ್ಮಿಸಿರುವ ತೆಂಗು ಅಣೆಗಳು ಎಷ್ಟು ಮತ್ತು ಖರ್ಚಾಗಿರುವ ಹಣವೆಷ್ಟು ?

ಈ) ಹೊಸದುರ್ಗ ತಾಲ್ಲೂಕಿನ ಪ್ರತಿ ಮಂಡಲ ಪಂಚಾಯಿತಿ ವ್ಯಾಪ್ತಿಯಲ್ಲಿ ತೆಂಗುಅಣೆ ನಿರ್ಮಾಣ ಕಾರ್ಯವನ್ನು ಹಮ್ಮಿಕೊಳ್ಳಲು ಸರ್ಕಾರವು ಕ್ರಮ ಕೈಗೊಳ್ಳುವುದೆ ?

ಶ್ರೀ ಎಂ. ಪಿ. ಪ್ರಕಾಶ್ (ವಾರ್ತಾ, ಪ್ರವಾಸೋದ್ಯಮ ಮತ್ತು ಸಂಸ್ಕೃತಿ ಸಚಿವರು ತೋಟಗಾರಿಕೆ ಸಚಿವರ ಪರವಾಗಿ).—

ಅ) ಹೌದು,

ಆ) ೩

ಇ) ಅಣೆಗಳು ೧೪.

ಖರ್ಚಾದ ಹಣ ರೂ. ೧೫,೮೭,೯೬೯-೬೯

ಈ) ಭೂ ರಹಿತ ಕೂಲಿ ಕಾರ್ಮಿಕರಿಗೆ ಒದಗಿಸುವ ಕೆಲಸ ಹಾಗೂ ಕಾರ್ಯಕ್ರಮದಂತೆ ಮತ್ತು ಜಲಾನಯನ ಪ್ರದೇಶದಲ್ಲಿ ಇದರ ಅವಶ್ಯಕತೆಯು ಹಾಗೂ ಹಣದ ಅವಕಾಶವನ್ನು ಗಮನದಲ್ಲಿಟ್ಟು ಕೊಂಡು ಹಮ್ಮಿಕೊಳ್ಳುವ ಆಲೋಚನೆ ಇದೆ.

ಶ್ರೀ ಜಿ. ರಾಮದಾಸ್.—ಮಾನ್ಯ ಅಧ್ಯಕ್ಷರೇ, ನಮ್ಮ ಕ್ಷೇತ್ರ ಸಾಮಾನ್ಯವಾಗಿ ಸಾವಿರಾರು ಎಕರೆ ತೆಂಗಿನ ಬೆಳೆಯಿರುವ ಪ್ರದೇಶವಾಗಿದೆ. ಅದಕ್ಕೋಸ್ಕರವಾಗಿ ಅಲ್ಲಿ ಹೆಚ್ಚಿನ ಪಿಕಪ್ಸ್ ಬೇಕಾಗಿದೆ ಇಲ್ಲಿ ವಾಣಿವಿಲಾಸ್ ಅಚ್ಚುಕಟ್ಟು ಇದ್ದು ಕ್ಯಾಚ್‌ಮೆಂಟ್ ಏರಿಯಾ ಇದು ಆಗಿರುವುದರಿಂದ ಹೊಸದಾಗಿ ಕೆರೆಯನ್ನು ಇಲ್ಲಿ ಕಟ್ಟುವುದಕ್ಕೆ ಸರ್ಕಾರಿ ನೀತಿಗನುಗುಣವಾಗಿ ಸಾಧ್ಯವಿಲ್ಲ. ಆದ್ದರಿಂದ ನಮ್ಮಲ್ಲಿ ಹೆಚ್ಚಿನ ಪಿಕಪ್ಸ್‌ಗಳನ್ನು ಮಾಡಬೇಕೆಂದೂ ಸರ್ಕಾರವನ್ನು ಕೇಳಿಕೊಳ್ಳುತ್ತೇನೆ. ಅಲ್ಲದೇ ಹೆಚ್ಚು ಹೆಚ್ಚು ಪಿಕಪ್ಸ್‌ಗಳನ್ನು ಕಟ್ಟಬೇಕೆಂದು ಗ್ರಾಮೀಣ ಅಭಿವೃದ್ಧಿ ಯೋಜನೆಯಡಿಯಲ್ಲೂ ಅಡಕವಾಗಿರುತ್ತದೆ. ಆದ್ದರಿಂದ ದಯವಿಟ್ಟು ಹೆಚಿ ನ ಪಿಕಪ್ಸ್ ಕಟ್ಟಿಸಬೇಕೆಂದೂ ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ಪಿ. ಪ್ರಕಾಶ್.—ಸನ್ಮಾನ್ಯ ಅಧ್ಯಕ್ಷರೇ, ಇದು ಒಳ್ಳೆಯ ಸಲಹೆ. ತೆಂಗಿನ ತೋಟ ಹೆಚ್ಚು ಹೊಂದಿರತಕ್ಕ ಹೊಸದುರ್ಗದಲ್ಲಿ ಕಾಮಗಾರಿ ಕೆಲಸಗಳು ಈಗಾಗಲೇ ನಡೆಯುತ್ತಿವೆ. ಮುಂದೆ ಇಂತಹ ಜಲಾನಯನ ಪ್ರದೇಶಗಳಲ್ಲೂ ಕೂಡಾ ಪಿಕಪ್ ಕಟ್ಟುವ ವ್ಯವಸ್ಥೆ ಮಾಡಲಾಗುವುದು,

ಶ್ರೀ ಜಿ. ರಾಮದಾಸ್.—ನಮ್ಮಲ್ಲಿ ಮಳೆ ಕಡಿಮೆ ಬರುತ್ತದೆ. ನಮ್ಮಲ್ಲಿ ಗುಂಡೇರಿ ಹಳ್ಳ ಎಂದು ಒಂದು ಹಳ್ಳ ಹರಿಯುತ್ತದೆ. ಅಲ್ಲಿ ಕೂಡಾ ಪಿಕಪ್ ಕಟ್ಟುವ ಬಗ್ಗೆ ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ.

ಶ್ರೀ ಎಂ. ಪಿ. ಪ್ರಕಾಶ್.—ಸನ್ಮಾನ್ಯ ಅಧ್ಯಕ್ಷರೇ, ಈ ಸಲಹೆಯನ್ನು ಸದಸ್ಯರು ಜಿಲ್ಲಾಪರಿಷತ್ತಿನ ಮುಂದೆ ಮಂಡಿಸಬೇಕು. ನಾವೂ ಕೂಡ ಸದಸ್ಯರ ಬೇಡಿಕೆಯನ್ನು ಜಿಲ್ಲಾಪರಿಷತ್ತಿನ ಮುಂದೆ ಕಳುಹಿಸುವುದಕ್ಕೆ ಏರ್ಪಾಡು ಮಾಡುತ್ತೇವೆ,

ಅಧ್ಯಕ್ಷರು.—ಇಲ್ಲಿಗೆ ಪ್ರಶ್ನೋತ್ತರ ವೇಳೆ ಮುಂಗಿಯಿತು.

ಶ್ರೀ ಎಂ. ವೀರಯ್ಯಸ್ವಾಮಿ.—ನನ್ನದು ಒಂದು ಪ್ರಶ್ನೆ ಇದೆ.

ಅಧ್ಯಕ್ಷರು.—ವೀರಯ್ಯಸ್ವಾಮಿಯವರೇ, ನಾನು ನಿಮ್ಮ ಹೆಸರು ಕರೆದಾಗ ತಾವು ಗೈರುಹಾಜರಿದ್ದಿರಿ. ಈಗ ಕಾಲಾವಕಾಶ ಕೊಡುವುದಕ್ಕಾಗುವುದಿಲ್ಲ.

ಶ್ರೀ ಎಂ. ವೀರಯ್ಯ ಸ್ವಾಮಿ.—ನಾನು ರಿಕ್ವೆಸ್ಟ್ ಮಾಡಿಕೊಳ್ಳುತ್ತಿದ್ದೇನೆ.

ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳು.

ಮುಖ್ಯ ಮಂತ್ರಿಗಳ ಭಾಷಣಗಳ ಪ್ರಕಟಣೆ.

೨೦೫೮. ಶ್ರೀ ಎಂ. ವೀರಯ್ಯಸ್ವಾಮಿ(ಚಿಂಚೋಳಿ).—ಮಾನ್ಯ, ವಾರ್ತಾ, ಪ್ರವಾಸೋದ್ಯಮ, ಸಂಸ್ಕೃತಿ ಮತ್ತು ಬೆಂಗಳೂರು ಅಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ೧೯೮೬ ರಿಂದ ೧೯೮೮ರ ಮಾರ್ಚ್‌ವರೆಗೆ ಸರ್ಕಾರದ ವತಿಯಿಂದ ಮುಖ್ಯಮಂತ್ರಿಗಳ ಎಷ್ಟು ಭಾಷಣಗಳನ್ನು ಹಾಗೂ ಇತರ ಲೇಖನಗಳನ್ನು ಮುದ್ರಿಸಿ ಪ್ರಕಾಶನಗೊಳಿಸಲಾಯಿತು ?

ಆ) ಪ್ರತಿಯೊಂದು ಪ್ರಕಾಶನದ ತಲೆ ಬರಹ ವಿವರವೇನು ? ಹಾಗೂ ಎಷ್ಟು ಪ್ರತಿಗಳನ್ನು ಮುದ್ರಿಸಲಾಯಿತು ?

ಇ) ಇವುಗಳಿಗೆ ತಗಲಿದ ಮುದ್ರಣ ವೆಚ್ಚವೆಷ್ಟು ?

ಶ್ರೀ ಎಂ. ಪಿ. ಪ್ರಕಾಶ್(ವಾರ್ತಾ ಪ್ರವಾಸೋದ್ಯಮ ಮತ್ತು ಸಂಸ್ಕೃತಿ ಸಚಿವರು).—

ಅ) ೧೯೮೬-೮೭, ೧೯೮೭-೮೮ರಲ್ಲಿ ಮಾನ್ಯ ಮುಖ್ಯಮಂತ್ರಿಗಳ ಒಂದು ಭಾಷಣವನ್ನು ಪುಸ್ತಕ ರೂಪದಲ್ಲಿ ಹೊರತರಲಾಗಿದೆ. ಹಾಗೂ ಇತರ ಲೇಖನಗಳನ್ನು ಮುದ್ರಿಸಿರುವುದಿಲ್ಲ.

ಆ) ''ಶ್ರೀ ರಾಮಕೃಷ್ಣ ಹೆಗಡೆ, ಕರ್ನಾಟಕ ರಾಜ್ಯದ ಮುಖ್ಯಮಂತ್ರಿಗಳ ಕೆಲವು ಆಯ್ದ ಭಾಷಣಗಳು'' ಎಂಬ ಒಂದು ಪುಸ್ತಕ. ೫೦,೦೦೦ ಪ್ರತಿಗಳನ್ನು ಮುದ್ರಿಸಲಾಯಿತು.

ಇ) ೧,೩೨,೯೬೫-೯೦ ರೂಗಳು.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು.

ಶ್ರೀ ಎ. ಲಕ್ಷ್ಮೀಸಾಗರ್.—ಲಿಖಿತ ಮೂಲಕ ಉತ್ತರಿಸುವ ಪ್ರಶ್ನೋತ್ತರಗಳ ಕಿಟೀನೇ ಪಟ್ಟಿಯನ್ನು ಸಭೆಯ ಮುಂದಿಡಂತ್ತೇನೆ.

ಅಧ್ಯಕ್ಷರು.—ಪ್ರಶ್ನೋತ್ತರ ಪಟ್ಟಿಯನ್ನು ಸಭೆಯ ಮುಂದಿಡಲಾಯಿತು. ಈಗ ಗಮನ ಸೆಳೆಯುವ ಸೂಚನೆಗಳು.

ಕನ್ನಡೇತರ ಪತ್ರಿಕೆಗಳಿಗೆ ಜಾಹೀರಾತು:

೧೬೧೫. ಶ್ರೀ ಎಸ್. ಎಂ. ಅಡ್ಯಂತಾಯ(ಸುರತ್ಕಲ್).—ಮಾನ್ಯ ವಾರ್ತಾ, ಪ್ರವಾಸೋದ್ಯಮ, ಕನ್ನಡ ಮತ್ತು ಸಂಸ್ಕೃತಿ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ೧-೧-೧೯೮೭ ರಿಂದ ೩೧-೩-೧೯೮೮ರವರೆಗೆ ರಾಜ್ಯದ ವಾರ್ತಾ ಇಲಾಖೆ ಜಾಹೀರಾತುಗಳನ್ನು ನೀಡುವುದರಲ್ಲಿ ಕನ್ನಡೇತರ ಪತ್ರಿಕೆಗಳು ಎಷ್ಟು ?

ಆ) ಮೇಲ್ಕಂಡ ಪತ್ರಿಕೆಗಳ ವಿವರ ಹಾಗೂ ನೀಡಿದ ಜಾಹೀರಾತಿನ ಮೊತ್ತವೆಷ್ಟು ?